# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 740/2024

**ಸಾಕ್ಷಿಯನ್ನು ದಿಃ 11.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಕುಮಾರ್ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 3 |
| ತಂದೆಯ ಹೆಸರು | ಸಿದ್ದಯ್ಯ | | |
| ವಯಸ್ಸು | 55 ವರ್ಷ | | |
| ಕೆಲಸ | ಚಾಲಕ | | |
| ವಾಸಸ್ಥಳ | ಬೀಜಗನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1 ನನ್ನ ಮಗಳು. ಚಾಸಾ–3 ನನ್ನ ಪತ್ನಿ. ಚಾಸಾ–4 ನನ್ನ ಮಗ. ಚಾಸಾ–5 ನನ್ನ ಸೊಸೆ. ಚಾಸಾ–6 ರಿಂದ 8 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆ. ನನಗೆ ಚಾಸಾ–1 ಮತ್ತು ಚಾಸಾ–4 ಇಬ್ಬರು ಮಕ್ಕಳು. ಚಾಸಾ–1 ರವರು 1ನೇ ಆರೋಪಿಯನ್ನು ಪ್ರೀತಿಸಿ ಮದುವೆಯಾಗಿದ್ದಾರೆ. ಚಾಸಾ–1 ಮತ್ತು 1ನೇ ಆರೋಪಿಯ ಮದುವೆ 2012ರಲ್ಲಿ ಹುಣಸೂರಿನ ಮಂಜುನಾಥ ದೇವಸ್ಥಾನದಲ್ಲಿ ನಡೆಯಿತು. ಮದುವೆಯಾದ ನಂತರ ಅವರಿಬ್ಬರು 6 ವರ್ಷ ಚೆನ್ನಾಗಿದ್ದರು. 1ನೇ ಆರೋಪಿಯ ಅನೈತಿಕ ಸಂಬಂಧ ಮತ್ತು ವರದಕ್ಷಿಣೆ ನೀಡಲಿಲ್ಲ ಎಂಬ ಕಾರಣಕ್ಕಾಗಿ ನ್ಯಾಯಾಲಯದ ಮುಂದಿರುವ ಆರೋಪಿತರು 2022ರಲ್ಲಿ ಚಾಸಾ–1 ರವರ ಜೊತೆ ಜಗಳ ಮಾಡಿದರು. ನಾನು ಸಮಾಧಾನ ಮಾಡಿ ನನ್ನ ಮಗಳು ಚಾಸಾ–1 ರವರನ್ನು ಪುನಃ ಆರೋಪಿತರ ಮನೆಗೆ ಕಳುಹಿಸಿದ್ದೆ. 2022 ಆಗಸ್ಟ್ ತಿಂಗಳಲ್ಲಿ ವರದಕ್ಷಿಣೆ ತಂದಿಲ್ಲ ಎಂದು ಆರೋಪಿತರು ಚಾಸಾ–1 ರವರ ಜೊತೆ ಪುನಃ ಗಲಾಟೆ ಮಾಡಿದರು. 1ನೇ ಆರೋಪಿ ಚಾಸಾ–1 ರವರಿಗೆ ಕೈಗಳಿಂದ ಹೊಡೆದಿದ್ದರು. ಆ ಕಾರಣದಿಂದಾಗಿ ಚಾಸಾ–1 ರವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರು. ನಾನು, ಚಾಸಾ–3 ಮತ್ತು 4 ರವರು ಹೋಗಿ ಜಗಳ ಬಿಡಿಸಿ ಸಮಾಧಾನ ಮಾಡಿದ್ದೆವು. ನಂತರ ಚಾಸಾ–1 ರವರು ಈ ಬಗ್ಗೆ ಹುಣಸೂರು ಗ್ರಾಮಾಂತರ ಠಾಣೆಗೆ ದೂರನ್ನು ಕೊಟ್ಟರು. ಅಲ್ಲಿ

ಆರೋಪಿತರು ಠಾಣೆಗೆ ಹಾಜರಾಗಿ ಇನ್ನು ಮುಂದೆ ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಮುಚ್ಚಳಿಕೆ ಬರೆದುಕೊಟ್ಟಿದ್ದರು. 2023ರ ಜನವರಿ ತಿಂಗಳಲ್ಲಿ ಚಾಸಾ-1 ರವರು ಆರೋಪಿತರ ಮನೆಗೆ ಹೋದಾಗ ಅವರು ಮನೆಗೆ ಸೇರಿಸಲಿಲ್ಲ. ನಂತರ ಊರಿನ ಯಜಮಾನರು ಆರೋಪಿತರನ್ನು ಕೇಳಿದಾಗ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿ ನಂತರ ಕರೆದುಕೊಂಡು ಹೋಗಲಿಲ್ಲ. ನಂತರ ಚಾಸಾ-1 ರವರು ಹುಣಸೂರು ಪಟ್ಟಣ ಠಾಣೆಯಲ್ಲಿ ದೂರನ್ನು ನೀಡಿದರು. ಅಲ್ಲಿಯೂ ಸಹ ಆರೋಪಿತರು ಮುಚ್ಚಳಿಕೆ ಬರೆದುಕೊಟ್ಟು ಕರೆದುಕೊಂಡು ಹೋಗುವುದಾಗಿ ಹೇಳಿದರೂ ಕೂಡ ಕರೆದುಕೊಂಡು ಹೋಗಿಲ್ಲ. ನಂತರ ಚಾಸಾ-1 ರವರು ಮೈಸೂರಿನ ಜಿಲಾಲ ಮಹಿಳಾ ಪೋಲಿಸ್ ಠಾಣೆಗೆ ದೂರು ನೀಡಿದರು.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 26.01.2023ರಂದು ಚಾಸಾ-1ರವರು ಸಂಜೆ 7.30 ಗಂಟೆಗೆ ನಮ್ಮ ಮನೆಯಲ್ಲಿದ್ದಾಗ 1ನೇ ಆರೋಪಿ ನಮ್ಮ ಮನೆಯ ಬಳಿ ಬಂದು ಏಕಾ ಏಕಿ ಚಾಸಾ-1 ರವರ ಮೇಲೆ ಜಗಳ ತೆಗೆದು ಬೇವರ್ಸಿ, ಲೋಫರ್ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಮುಖಕ್ಕೆ ಮತ್ತು ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಚಾಸಾ-5 ಮತ್ತು 6 ರವರು ಜಗಳ ಬಿಡಿಸಿ ಸಮಾಧಾನ ಮಾಡಿದ್ದರು ಎಂದು ಚಾಸಾ-1 ನನ್ನ ಬಳಿ ಹೇಳಿದರು ಎಂದರೆ ಸರಿ. ನಂತರ 2023 ನವೆಂಬರ್ ನಲ್ಲಿ ಚಾಸಾ-1 ರವರು ಮಗವಿನ ಜೊತೆ ಆರೋಪಿತರ ಮನೆಗೆ ಹೋಗಿದ್ದಾಗ ಆರೋಪಿತರು ಚಾಸಾ-1ರವರ ಜೊತೆ ಜಗಳ ತೆಗೆದು ನೀನು ಯಾವುದೇ ವರದಕ್ಷಿಣೆ ತಂದಿಲ್ಲ, ಬೇರೆಯವರನ್ನು ಮದುವೆಯಾಗಿದ್ದರೆ ಹೆಚ್ಚಿನ ವರದಕ್ಷಿಣೆ ಸಿಗುತ್ತಿತ್ತು, ನೀನು ಪೋಲೀಸ್ ಠಾಣೆಗೆ ದೂರು ನೀಡಿದ್ದಿಯಾ ನಿನ್ನನ್ನು ಮನೆಗೆ ಸೇರಿಸುವುದಿಲ್ಲ ಎಂದು ಗಲಾಟೆ ಮಾಡಿ ಕೊಲೆ ಬೆದರಿಕೆ ಹಾಕಿದ್ದು, ಚಾಸಾ-1 ರವರು ಅದೇ ದಿನ ವಾಪಸ್ಸು ನಮ್ಮ ಮನೆಗೆ ಬಂದು ನಡೆದ ವಿಚಾರವನ್ನು ನನಗೆ ತಿಳಿಸಿದರು ಎಂದರೆ ಸರಿ. ದಿಃ 12.02.2024 ರಂದು ಚಾಸಾ.1

ರವರು ಮಹಿಳಾ ಪೋಲೀಸ್ ಠಾಣೆಗೆ ದೂರು ನೀಡಿದ್ದು ಅಲ್ಲಿಯೂ ಕೂಡ ಆರೋಪಿತರು ವಿಚಾರಣೆಗೆ ಬರದೇ ಇದ್ದ ಕಾರಣ ದಿಃ 21.02.2024 ರಂದು ಚಾಸಾ–1 ರವರು ದೂರು ನೀಡಿದರು ಎಂದರೆ ಸರಿ. ಮೇಲೆ ಹೇಳಿದ ಹೇಳಿಕೆಯನ್ನು ದಿಃ 26.02.2024 ರಂದು ಪೋಲೀಸರ ಮುಂದೆ ನೀಡಿದ್ದೇನೆ ಎಂದರೆ ಸರಿ. ನನ್ನ ಮಗಳಿಗೆ ಹಿಂಸೆ ಕಿರುಕುಳ ನೀಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರು ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ.JSA ವಕೀಲರಿಂದಃ**

ಆರೋಪಿತರು ಹಾಜರಿದ್ದು, 1ನೇ ಆರೋಪಿಯು ತಮ್ಮ ವಕೀಲರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಹೇಳಿದ್ದು, ಆದರೆ ವಕೀಲರ ಪರವಾಗಿ ಬೇರೆ ಯಾರು ಕೂಡ ಪ್ರಕರಣವನ್ನು ಪ್ರತಿನಿಧಿಸದೇ ಇರುವ ಕಾರಣ 1ನೇ ಆರೋಪಿಯ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.